Sri B. NANJAPPA.—Are there persons who have applied for forming private lay outs, and is it a fact that they have not been replied either from the Corporation or the Trust Board?

Sri K. PUTTASWAMY.—If the hon'ble member looks into the Trust Board Act, it will be clear that it is the Trust Board alone that can taken up the work of lay outs. Unfortunately the Corporation has gone on permitting private lay outs. Therefore, if there are any applications pending with the Corporation, under law it is not in a position to sanction private lay outs. It has been clearly pointed out.

Sri K. S. SURYANARAYANA RAO.—Will the Government consider the question of giving permission to private layouts for which applications have been made before the publication of the final notification?

Sri K. PUTTASWAMY.—I have already made clear that the Trust Board will not countenance any application for private lay outs where they are actually working.

ಶ್ರೀ ಎಸ್. ಗೋಪಾಲಗೌಡ.—ಕನ್ನಡದ ಪ್ರಶ್ನೋತ್ತರಗಳಲ್ಲಿ ಏಳು ನೆಲಗಟ್ಟುಗಳಿಗೆ ಕಾರ್ಪೊರೇಷನ್ನಿನವರು ಮಂಜೂರಾತಿ ಕೊಟ್ಟಿದ್ದಾರೆ ಎಂದು ಇದೆ. ಮಾನ್ಯ ಮಂತ್ರಿಗಳು ಮೂರು ಎಂದು ಹೇಳಿದರು. ಯಾವುದು ನರಿ ಸ್ವಾಮಿ?

Sri K. PUTTASWAMY.—I have already corrected the answer by saying that it is 3.

ಶ್ರೀ ಎಸ್. ಗೋಪಾಲಗೌಡ.—ಈ ಮೂರು ಖಾತರಿ ಸಂಸ್ಥೆಗಳೋ ಅಥವಾ ವ್ಯಕ್ತಿಗಳೋ ಸ್ವಾಮಿ?

Sri K. PUTTASWAMY.—They are individuals. It is not an organisation.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೆಲವು ಜನ ರೆವೆನ್ಯೂ ಜಮೀನನ್ನು ತೆಗೆದುಕೊಂಡು ರೇ ಔಟ್ ಮಾಡಿ ಹಣಸಂಪಾದನೆ ಮಾಡಲು ಒಂದು ಉದ್ಯೋಗ ಮಾಡಿಕೊಂಡಿದ್ದಾರೆ. ಇದನ್ನು ತಡೆಗಟ್ಟಿದರೆ ಕಾರ್ಪೊರೇಷನ್ನಿಗೆ ಹೆಚ್ಚು ಆದಾಯಬರುತ್ತದೆ. ಈ ವ್ಯವಸ್ಥೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ಸ್ವಾಮಿ?

Sri K. PUTTASWAMY.—This relates to Akkithimmanahalli and I have furnished all information.

The establishment of Ryots' Multi-Purpose Co-operative Society, Mandya

*Q.—295. Sri J. DEVIAH (Mandya).—

Will the Government be pleased to state:—

(*a*) the date on which the Ryots' Multi-purpose Co-operative Society. Mandya (Ryots' Agricultural Produce Marketing Co-operative Society) was established;

(*b*) the amount of grant and loan given to the said Society for the construction of the building of the said Society;

(*c*) the amount so far spent for the construction of the building;

(*d*) whether these buildings have been constructed after calling for tenders;

(*e*) if no, the difficulties that were in the way of getting the building constructed after calling for tenders?

A.—Sri KONDAJJI BASAPPA (Deputy Minister for Co-operation)—

(*a*) 13-8-1948.
(*b*) Loan.—Rs. 3,93,750 ; Grant—. Rs. 56,250
(*c*) Rs. 10,34,347-71
(*d*) No.
(*e*) The Board of Management considered it desirable and advantageous to get the buildings constructed on piece work basis as they could have better control over the quality of construction and also could have the construction completed more expeditiously.

ಶ್ರೀ ಜೆ. ದೇವಯ್ಯ.—ಮಂಡ್ಯ ರೈತರ ವಿವಿಧೋದ್ದೇಶ ಸಹಕಾರ ಸಂಘದಲ್ಲಿ ಎಷ್ಟು ಜನ ಷೇರುದಾರರಿದ್ದಾರೆ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ಮಾಹಿತಿ ನನ್ನ ಹತ್ತಿರ ಇಲ್ಲ. ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ತರಿಸಿಕೊಡುತ್ತೇನೆ.

ಶ್ರೀ ಜೆ. ದೇವಯ್ಯ.—ಷೇರುದಾರರನ್ನು ಮಾಡಿ ಎಷ್ಟು ವರ್ಷವಾಯಿತು, ಎಷ್ಟು ಜನ ಷೇರು ದಾರರನ್ನು ಮಾಡಿದ್ದಾರೆ?

ಶ್ರೀ ಕೊಂಡಜ್ಜಿ ಬಸಪ್ಪ.—ಅದು 1948ನೆಯ ಇಸವಿಯಲ್ಲಿ ರಿಜಿಸ್ಟರಾಗಿದೆ. ಷೇರುದಾರರ ಸಂಖ್ಯೆ ಹೇಳುವುದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ತರಿಸಿಕೊಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಾಲ ಮತ್ತು ಗ್ರಾಂಟ್ ಕೊಡಬೇಕಾದರೆ ಯಾವ ತತ್ವಗಳನ್ನು ಅನುಸರಿಸುತ್ತೀರಿ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಹಣವನ್ನೆಲ್ಲ ಒಂದೇ ವರ್ಷದಲ್ಲಿ ಕೊಟ್ಟಿದ್ದಲ್ಲ. 1952 ರಿಂದ ಇಲ್ಲಿಯವರೆಗೂ ಕೊಟ್ಟಿದ್ದೇವೆ. ಸಾಲ ಮತ್ತು ಗ್ರಾಂಟ್ ಬೇಕೆಂದು ಅವರಿಂದ ಕೇಳಿಕೆ ಬರುತ್ತದೆ. ಅದನ್ನು ಪರಿಶೀಲನೆ ಮಾಡಿ ಮಧ್ಯಮ ಪ್ರಮಾಣದ ಗೋಡೌನ್‌ಗಳಿಗೆ ಹನ್ನೆರಡೂವರೆ ಸಾವಿರ ರೂಪಾಯಿ ಸಾಲವಾಗಿಯೂ ಎರಡೂವರೆ ಸಾವಿರ ರೂಪಾಯಿ ಸಬ್ಸಿಡಿಯಾಗಿಯೂ ಮತ್ತು ಸಣ್ಣ ಪ್ರಮಾಣದ ಗೋಡೌನುಗಳಿಗೆ ಹತ್ತುಸಾವಿರ ರೂಪಾಯಿ ಸಾಲ ಮತ್ತು ಎರಡೂವರೆ ಸಾವಿರ ರೂಪಾಯಿ ಸಬ್ಸಿಡಿ ಕೊಡುತ್ತೇವೆ.

ಶ್ರೀ ಜೆ. ದೇವಯ್ಯ.—ಪ್ರಾರಂಭವಾಗಲಾಯಿತು ಇಲ್ಲಿಯವರೆವಿಗೂ ಅದರಲ್ಲಿ ಏನು ಉತ್ಪತ್ತಿ ಆಗಿದೆ ಸ್ವಾಮಿ?

ಶ್ರೀ ಕೊಂಡಜ್ಜಿ ಬಸಪ್ಪ.—ಚೆನ್ನಾಗಿ ಕೆಲಸಮಾಡುತ್ತಿದೆ. ಮಾನ್ಯ ಸದಸ್ಯರು ಕೇಳುವ ಪ್ರಶ್ನೆ ಇದರಲ್ಲಿ ಬರುವುದಿಲ್ಲ. ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಬಿ. ಚೆನ್ನಬ್ಯೆರೇಗೌಡ.—10, 34, 347-71 ರೂಪಾಯಿಗಳನ್ನು ಕಟ್ಟಡಗಳಿಗಾಗಿ ಕೊಟ್ಟಿದೆ ಎಂದು ಹೇಳಿದ್ದಾರೆ. ಇಷ್ಟುಭಾರಿ ವೆಚ್ಚದ ಕಟ್ಟಡವನ್ನು ಸ್ವಂತವಾಗಿ ಅವರೇ ಕಟ್ಟಿಸಿದರೋ ಅಥವಾ ಪಬ್ಲಿಕ್‌ವರ್ಕ್ಸ್ ಇಲಾಖೆಯವರ ಮೇಲ್ವಿಚಾರಣೆಯಲ್ಲಿ ಕಟ್ಟಿಸಿದರೋ?

ಶ್ರೀ ಕೊಂಡಜ್ಜಿ ಬಸಪ್ಪ.—ಹತ್ತುಲಕ್ಷ ರೂಪಾಯಿ ಒಂದೇ ಒಂದು ಕಟ್ಟಡಕ್ಕೆ ಆಗಿಲ್ಲ. ಪ್ರವಾಸಿ ಮಂದಿರವನ್ನು 61,810 ರೂಪಾಯಿಗಳಿಗೆ ಕೊಂಡುಕೊಂಡಿದ್ದಾರೆ. ಮೇನ್ ಬಿಲ್ಡಿಂಗ್ ಪಕ್ಕದಲ್ಲಿ ಕಟ್ಟಿದ್ದಾರೆ, ಕೆಲವು ಗೋಡೌನುಗಳನ್ನೂ ಕಟ್ಟಿಧ್ದಾರೆ, ಅದಕ್ಕೆ ಸುಮಾರು 2,56,980 ರೂಪಾಯಿ, ರೈಸ್‌ಮಿಲ್, ಆಯಿಲ್ ಮಿಲ್ ಮತ್ತು ಗೋಡೌನ್ ಕಟ್ಟಡಗಳಿಗಾಗಿ 3,25,630 ರೂಪಾಯಿ, ಹಳ್ಳಿಗಳಲ್ಲಿ ಕಟ್ಟಿರುವ ಗೋಡೌನ್‌ಗಳಿಗೆ 1,18,536 ರೂಪಾಯಿ, ಗೋಡೌನುಗಳು (ಪ್ಲಾನ್ಸ್ ಅಂಡ್ ನಾನ್ ಪ್ಲಾನ್ಸ್ ಸ್ಕೀಂ) ಇದಕ್ಕೆ 2,71,417 ರೂಪಾಯಿ, ಒಟ್ಟು 10,34,347 ರೂಪಾಯಿ ಆಗುತ್ತದೆ.